**ಅಡಗೂರು ಹೆಚ್.ವಿಶ್ವನಾಥ್ ರವರ 13 ಪ್ರಶ್ನೆಗಳಿಗೆ ಹೆಚ್.ಡಿ.ಕೆ. ಉತ್ತರ**

ಪ್ರಶ್ನೆ 1 : ಕುಂಬಳಕಾಯಿ ಕಳ್ಳ ಎಂದರೆ ತಾವು ತಮ್ಮ ಕುಟುಂಬದವರು ಹೆಗಲು ಮುಟ್ಟಿಕೊಳ್ಳುವುದು ಏಕೆ?

ಉತ್ತರ : **ಅದು ನಿಮ್ಮ ಸಂಸ್ಕೃತಿ, ನಮ್ಮದಲ್ಲ.**

ಪ್ರಶ್ನೆ 2 : ಹೆಚ್.ಎನ್.ಕೃಷ್ಣ ಅವರನ್ನು ಕೆ.ಪಿ.ಎಸ್.ಸಿ.ಗೆ ನೇಮಕ ಮಾಡಲೆಂದೇ 1996ರಲ್ಲಿ ತಮ್ಮ ತಂದೆಯವರು ಮುಖ್ಯಮಂತ್ರಿಗಳಾಗಿದ್ದಾಗ ನಿಯಮಾವಳಿಗೆ ತಿದ್ದಪಡಿ ತಂದಿದ್ದು ಸುಳ್ಳೇ?

ಉತ್ತರ : **1996 ರಲ್ಲಿ ಜೆ.ಹೆಚ್.ಪಟೇಲ್ ರವರು ಮುಖ್ಯಮಂತ್ರಿ ಮತ್ತು ಸಿದ್ದರಾಮಯ್ಯ ರವರು ಉಪಮುಖ್ಯಮಂತ್ರಿಯಾಗಿದ್ದ ಸಂಧರ್ಭದಲ್ಲಿ ಆಯೋಗದಲ್ಲಿ ಓಕಳಿ ಪಾಟೀಲ್ ರವರು ಹಂಗಾಮಿ ಅಧ್ಯಕ್ಷರಾಗಿದ್ದರು. ಆಯೋಗದ ಸದಸ್ಯರ ಸಂಖ್ಯೆಯನ್ನು 8 ರಿಂದ 9 ಕ್ಕೆ ಏರಿಸಿ ಶ್ರೀ ಪಂಚಗಟ್ಟಿ ರವರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಲಾಯಿತು. ಪ್ರಸ್ತುತ ಜೆ.ಹೆಚ್.ಪಟೇಲ್ ರವರು ನಮ್ಮೊಡನೆ ಇಲ್ಲದ ಕಾರಣ ಈ ಪ್ರಶ್ನೆಗೆ ಉತ್ತರಿಸಲು ಅಂದಿನ ಉಪ ಮುಖ್ಯಮಂತ್ರಿ ಸಿದ್ದರಾಮಯ್ಯ ರವರೇ ಸೂಕ್ತ ವ್ಯಕ್ತಿ.**

ಪ್ರಶ್ನೆ 3 : ತಾವು 2006 ರಲ್ಲಿ ಮುಖ್ಯಮಂತ್ರಿಯಾಗಿದ್ದಾಗ ಕೆ.ಪಿ.ಎಸ್.ಸಿ. ಸದಸ್ಯರ ಸಂಖ್ಯೆಯನ್ನು ಮತ್ತೆ 9 ರಿಂದ ಕಡಿಮೆ ಮಾಡಿದ್ದು ಏಕೆ?

ಉತ್ತರ : **2006 ರಲ್ಲಿ ಆಯೋಗದ ಸದಸ್ಯರ ಸಂಖ್ಯೆಯನ್ನು ಕಡಿಮೆ ಮಾಡಿರುವುದಿಲ್ಲ. ಸೂಕ್ತ ಮಾಹಿತಿ ಪಡೆದು ತಪ್ಪು ತಿಳುವಳಿಕೆಯನ್ನು ಹೋಗಲಾಡಿಸಿಕೊಳ್ಳಿ.**

ಪ್ರಶ್ನೆ 4 : ಉತ್ತರ ಪತ್ರಿಕೆ ಮರುಮೌಲ್ಯಮಾಪನ ಮಾಡಲು ಸಿ.ಐ.ಡಿ.ಗೆ ಅಧಿಕಾರ ಇಲ್ಲ ಎನ್ನುವ ತಾವು ದಲಿತ ಮಹಿಳೆಯ ಫೋನ್ ಕರೆಯ ವಿವರ ಪಡೆಯಲು ಯಾವ ಅನುಮತಿ ಪಡೆದುಕೊಂಡಿರುವಿರಾ? ಇದು ದಲಿತ ಮಹಿಳೆಯ ಮೇಲಿನ ದೌರ್ಜನ್ಯವಲ್ಲವೇ?

ಉತ್ತರ : **ಇಲ್ಲಿ ಜಾತಿ ಪ್ರಶ್ನೆ ಉದ್ಭವಿಸದು. ಸಿ.ಐ.ಡಿ. ವರದಿಯಲ್ಲಿ ದೂರವಾಣಿ ಕರೆ ವಿವರವನ್ನು ಮೇಲೆ ಆರೋಪ ಪಟ್ಟಿಯಲ್ಲಿ ಉಲ್ಲೇಖಿಸಿದ್ದು, ಅದೀಗ ಸಾರ್ವಜನಿಕ ಮಾಹಿತಿಯಾಗಿದೆ.**

ಪ್ರಶ್ನೆ 5 : ಕೇವಲ 362 ಮಂದಿಗೆ ನ್ಯಾಯ ಸಿಕ್ಕರೆ ಸಾಕೆ. ಉಳಿದ ಲಕ್ಷಾಂತರ ಅಭ್ಯರ್ಥಿಗಳ ಭವಿಷ್ಯ ಯೋಚಿಸುವುದು ತಮ್ಮ ಕರ್ತವ್ಯವಲ್ಲವೆ?

ಉತ್ತರ : **3 ಹಂತದ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ 362 ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಮಾತ್ರ ಪ್ರಕ್ರಿಯೆ ನಡೆಸಲಾಗಿದೆ. ಸರ್ಕಾರ ತನ್ನ ವಿವೇಚನೆಯನ್ನು ಬಳಸಿ ಎಲ್ಲಾ ಅರ್ಜಿದಾರರಿಗೂ ನೌಕರಿ ಕೊಡುವುದಾದರೆ ಸರ್ಕಾರವನ್ನು ಸ್ವಾಗತಿಸುತ್ತೇನೆ. ರಾಜ್ಯದಲ್ಲಿ 2 ಲಕ್ಷ ಹುದ್ದೆಗಳು ಖಾಲಿಯಿದ್ದು, ಸಾರ್ವಜನಿಕರಿಗೆ ಸರ್ಕಾರಿ ಸೇವೆ ವಿತರಣೆಯಲ್ಲಿ ಆಗುತ್ತಿರುವ ವಿಳಂಬವನ್ನು ತಪ್ಪಿಸಬಹುದಾಗಿದೆ.**

ಪ್ರಶ್ನೆ 6: ಕೆ.ಪಿ.ಎಸ್.ಸಿ. ಎಷ್ಟರ ಮಟ್ಟಿಗೆ ಕೆಟ್ಟಿದೆ ಎನ್ನುವುದು ಇಡೀ ರಾಜ್ಯದ ಜನರಿಗೆ ಗೊತ್ತಿದ್ದರೂ, 362 ಅಭ್ಯರ್ಥಿಗಳ ಪರ ತಾವು ಹೋರಾಟ ಮಾಡುತ್ತಿರುವ ಉದ್ದೇಶವಾದರೂ ಏನು, ಈ 362 ಅಭ್ಯರ್ಥಿಗಳ ಪೈಕಿ ತಮ್ಮ ಕಡೆಯವರೇ ಸುಮಾರು 127 ಅಭ್ಯರ್ಥಿಗಳು ಇದ್ದಾರೆ ಎಂಬ ಮಾಹಿತಿ ಇದೆ. ಇದು ಸತ್ಯವೇ?

**ಉತ್ತರ : ಕೆ.ಪಿ.ಎಸ್.ಸಿ.ಗೆ ಕಾಯಕಲ್ಪ ನೀಡುವ ನಿಟ್ಟಿನಲ್ಲಿ ಬಹಿರಂಗ ಚರ್ಚೆಯ ಆಹ್ವಾನವನ್ನು ಪ್ರಾರಂಭದಲ್ಲಿ ಒಪ್ಪಿ, ನಂತರ ಪಲಾಯನ ಮಾಡಿದ ಮಾನ್ಯ ಮುಖ್ಯಮಂತ್ರಿರವರು ಈ ಪ್ರಶ್ನೆಗೆ ಉತ್ತರ ನೀಡಬೇಕು. ಸರ್ಕಾರದ ಕಾನೂನು ಬಾಹಿರ ಕ್ರಮದ ವಿರುದ್ದ ಹೋರಾಟವೇ ಹೊರತು, 362 ಮಂದಿಯ ಪ್ರಶ್ನೆಯಲ್ಲ. ತಮ್ಮ ಆರೋಪದಂತೆ ಈ ಪಟ್ಟಿಯಲ್ಲಿ ನಮ್ಮ ಕಡೆಯವರು 127 ಅಭ್ಯರ್ಥಿಗಳು ಇದ್ದರೆ ಅದನ್ನು ಈ ಕೂಡಲೇ ಬಹಿರಂಗಪಡಿಸಿ.**

ಪ್ರಶ್ನೆ 7 : 1998, 1999, 2004 ರ ಕೆ.ಪಿ.ಎಸ್.ಸಿ. ನೇಮಕಾತಿ ವಿಚಾರಣೆಯಿಂದ ಕರ್ನಾಟಕ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ಬಂದಾಗ ಮುಖ್ಯ ನ್ಯಾಯಮೂರ್ತಿಗಳಾದ ಶ್ರೀ ವಘೇಲಾರವರು ಅನಾಮಧೇಯ ಪತ್ರಗಳ ನೆಪವೊಡ್ಡಿ ಹಿಂದೆ ಸರಿದಿದ್ದಾರೆ. ಅವರಿಗೆ ಅನಾಮಧೇಯ ಪತ್ರಗಳನ್ನು ಬರೆದವರಾರು ಮತ್ತು ಬೆದರಿಕೆ ಹಾಕಿದವರಾರು?

**ಉತ್ತರ : ತಮ್ಮದೇ ಪಕ್ಷದ ಮುಖ್ಯಮಂತ್ರಿ, ಗೃಹಮಂತ್ರಿ ಮತ್ತು ಹೊಸದಾಗಿ ನೇಮಕವಾಗಿರುವ ಗೃಹಮಂತ್ರಿಗಳ ಸಲಹೆಗಾರರಿಗೆ ತಾವೇ ಮನವಿ ಮಾಡಿ ಈ ಬಗ್ಗೆ ತನಿಖೆ ಮಾಡಿಸಿ ಸತ್ಯಾಂಶವನ್ನು ಜನತೆಯ ಮುಂದಿಡುವುದು ಸೂಕ್ತ.**

ಪ್ರಶ್ನೆ 8: ಕೆ.ಪಿ.ಎಸ್.ಸಿ. ಮಾಜಿ ಅಧ್ಯಕ್ಷ ಹೆಚ್.ಎನ್.ಕೃಷ್ಣ ಪರಪ್ಪನ ಅಗ್ರಹಾರ ಜೈಲಿನಲ್ಲಿದ್ದಾಗ ಅವರನ್ನು ತಾವು ಭೇಟಿ ಮಾಡಿದ್ದ ಕಾರಣವೇನು?

**ಉತ್ತರ : ಮಾನವೀಯ ನೆಲೆಗಟ್ಟಿನಲ್ಲಿ ಭೇಟಿ.**

ಪ್ರಶ್ನೆ 9 : ಕಾನೂನು ವಿಷಯವನ್ನು ಜಾತಿ ಹಾಗೂ ರಾಜಕಾರಣ ವಿಷಯವನ್ನಾಗಿ ಮಾಡುವುದು ಎಷ್ಟರ ಮಟ್ಟಿಗೆ ಸರಿ?

**ಉತ್ತರ : ಸರ್ಕಾರದ ಕಾನೂನು ಬಾಹಿರ ಕ್ರಮದ ವಿರುದ್ದ ಹೋರಾಟವೇ ಹೊರತು ಜಾತಿ ಮತ್ತು ರಾಜಕಾರಣದ ಪ್ರಶ್ನೆ ಉದ್ಭವಿಸದು. ಅಹಿಂದ ಜನರ ಏಳಿಗೆಗೆ ಬದುಕು ಎಂದು ಅಹಿಂದ ಜನರಿಗೆ ದ್ರೋಹ ಮಾಡುತ್ತಿರುವ ಮುಖ್ಯಮಂತ್ರಿರವರು ಪಲಾಯನ ಮಾಡದೇ ಜನತೆಗೆ ಉತ್ತರಿಸಲಿ.**

ಪ್ರಶ್ನೆ 10 : ಇಷ್ಟೆಲ್ಲಾ ವಿವಾದ ಆದರೂ ಕೆ.ಪಿ.ಎಸ್.ಸಿ. ಹಾಲಿ ಸದಸ್ಯರು, ಮಾಜಿ ಸದಸ್ಯರು ಮತ್ತು ಮಾಜಿ ಅಧ್ಯಕ್ಷರುಗಳು ಯಾಕೆ ಸುಮ್ಮನಿದ್ದಾರೆ. ಅವರ ಪರವಾಗಿ ತಮ್ಮ ಕುಟುಂಬದವರೇ ಯಾಕೆ ಮಾತನಾಡುತ್ತಿದ್ದಾರೆ?

**ಉತ್ತರ: ಮಾಜಿ ಮತ್ತು ಹಾಲಿ ಅಧ್ಯಕ್ಷ ಮತ್ತು ಸದಸ್ಯರುಗಳಿಗೆ ಈ ಪ್ರಶ್ನೆಯನ್ನು ತಾವು ಕಳುಹಿಸುವುದು ಸೂಕ್ತ. ಸರ್ಕಾರದ ಕಾನೂನು ಬಾಹಿರ, ದುಡುಕಿನ ಮತ್ತು ಅಪಕ್ವ ನಿರ್ಧಾರದ ವಿರುದ್ಧ ಹೋರಾಟವೇ ಹೊರತು ಯಾರ ಪರ ಅಥವಾ ವಿರುದ್ಧ ಅಲ್ಲ.**

ಪ್ರಶ್ನೆ 11 : ಕಳೆದ 20 ವರ್ಷದಿಂದ ಕೆ.ಪಿ.ಎಸ್.ಸಿ. ತಮ್ಮ ಕುಟುಂಬದವರ ಹಿಡಿತದಲ್ಲಿಯೇ ಇದೆ. ಹೆಚ್.ಎನ್.ಕೃಷ್ಣ ಅಧ್ಯಕ್ಷರಾಗುವುದಕ್ಕೆ ಮೊದಲು ಇಷ್ಟು ಆರೋಪ ಬಂದಿರಲಿಲ್ಲ. ಗೋನಾಳ ಭೀಮಪ್ಪರವರನ್ನು ತಾವೇ ನೇಮಕ ಮಾಡಿದ್ದೀರಿ. ಅದಕ್ಕೆ ತಾವು ಇವರುಗಳ ರಕ್ಷಣೆಗೆ ನಿಂತಿದ್ದೀರಿ ಎಂಬ ಮಾತು ಸುಳ್ಳೇ?

**ಉತ್ತರ : ಇದುವರೆಗೆ ನಮ್ಮ ಕುಟುಂಬವರ್ಯ್ಯಾರು ಆಯೋಗದ ಸದಸ್ಯ ಅಥವಾ ಅಧ್ಯಕ್ಷರಾಗಿಲ್ಲ. 1996 ರಲ್ಲಿ ಜೆ.ಹೆಚ್.ಪಟೇಲ್ ರವರ ಕಾಲದಲ್ಲಿ ಸಿದ್ದರಾಮಯ್ಯ ರವರು ಉಪಮುಖ್ಯಮಂತ್ರಿಯಾಗಿ ಇದ್ದ ಸರ್ಕಾರ ಡಾ: ಹೆಚ್.ಎನ್.ಕೃಷ್ಣ ರವರನ್ನು ಸದಸ್ಯರನ್ನಾಗಿ ಮತ್ತು 2001 ರಲ್ಲಿ ತಾವು ಸಚಿವ ಸಂಪುಟದ ಸದಸ್ಯರಾಗಿದ್ದ ಎಸ್.ಎಂ.ಕೃಷ್ಣ ನೇತೃತ್ವದ ಸರ್ಕಾರವು ಇವರನ್ನು ಅಧ್ಯಕ್ಷರನ್ನಾಗಿ ನೇಮಿಸಿರುತ್ತದೆ. 1998, 1999 ಮತ್ತು 2004ನೇ ಸಾಲಿನ ನೇಮಕಾತಿ ಸಂಧರ್ಭದಲ್ಲಿದ್ದ ಲಿಲಿಯನ್ ಜೇವಿಯರ್, ಹೆಚ್.ಎಸ್.ಪಾಟೀಲ್, ವೆಂಕಟಸ್ವಾಮಿ ಮತ್ತು ದಾಸಯ್ಯ ರವರುಗಳು ಕಾಂಗ್ರೆಸ್ ಪಕ್ಷದ ನೇತೃತ್ವದ ಸರ್ಕಾರದಿಂದ ನೇಮಕಗೊಂಡವರು.**

**ಗೋನಾಳ ಭೀಮಪ್ಪ ರವರು ದಲಿತರಾದ ಕಾರಣ ಸಾಮಾಜಿಕ ನ್ಯಾಯದ ದೃಷ್ಠಿಯಿಂದ 2006 ರಲ್ಲಿ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಯಿತು.**

ಪ್ರಶ್ನೆ 12 : ಆಯ್ಕೆ ಪಟ್ಟಿಯಲ್ಲಿರುವ 362 ಮಂದಿಯೂ ನಿರುದ್ಯೋಗಿಗಳೇ? ಅವರು ಬೇರೆ ಉದ್ಯೋಗದಲ್ಲಿ ಇಲ್ಲವೇ. ಸರ್ಕಾರಿ ಉದ್ಯೋಗದಲ್ಲಿದ್ದು, ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸುತ್ತಿರುವ ಅವರ ವಿರುದ್ಧ ಯಾಕೆ ಕ್ರಮ ಕೈಗೊಳ್ಳಬಾರದು?

**ಉತ್ತರ : ಸರ್ಕಾರದ ಕಾನೂನು ಬಾಹಿರ ಚಟುವಟಿಕೆಯ ವಿರುದ್ಧ ಹೋರಾಟ ಸಂವಿಧಾನ ನೀಡಿರುವ ಮೂಲಭೂತ ಹಕ್ಕು. ಡಿವೈ.ಎಸ್.ಪಿ. ಆಗಿ ಆಯ್ಕೆಯಾಗಿರುವ ಸೋಲಿಗ ಜನಾಂಗದ ರವಿರಾಮಯ್ಯ, ಜೀವನ ಪರ್ಯಂತ ಪೇದೆಯಾಗಿ ನಿಮ್ಮ ಮನೆ ಕಾಯಲು ಬಯಸುವಿರಾ?**

ಪ್ರಶ್ನೆ 13 : ಆಯ್ಕೆ ಪಟ್ಟಿಯಲ್ಲಿ 362 ಅಭ್ಯರ್ಥಿಗಳಿದ್ದಾರೆ. ಆದರೆ ಪ್ರತಿಭಟನೆಯಲ್ಲಿ 50 ಕ್ಕೂ ಕಡಿಮೆ ಜನ ಇರುತ್ತಾರೆ. ಉಳಿದವರೆಲ್ಲಾ ಎಲ್ಲಿದ್ದಾರೆ?

**ಉತ್ತರ : ಪ್ರಶ್ನೆ ಸಂಖ್ಯೆ 12 ಮತ್ತು 13 ಒಂದಕ್ಕೊಂದು ವ್ಯತಿರಿಕ್ತವಾಗಿವೆ. ಶಾಂತಿಯುತವಾಗಿ ಪ್ರತಿಭಟನೆ ನಡೆಸುವವರ ವಿರುದ್ಧ ಕ್ರಮ ಕೈಗೊಳ್ಳಲು ಬಯಸುವುದು ನಿಮ್ಮ ಮನಸ್ಥಿತಿಗೆ ಹಿಡಿದ ಕನ್ನಡಿಯಂತಿದೆ.**